## ನೀಲಿ ಚಿತ್ರಗಳು

ಲೈಂಗಿಕ ಅಪರಾಧಗಳನ್ನು ಎಸಗುವವರಲ್ಲಿ ಕೆಲವರು ಅತಿಯಾಗಿ ನೀಲಿಚಿತ್ರಗಳನ್ನು ವೀಕ್ಷಿಸುತ್ತಾರೆ ಎಂದು ಪೋಲೀಸ್ ದಾಖಲೆಗಳು ಹೇಳುತ್ತವೆ. ಈ ಕಾರಣಕ್ಕಾಗಿ ನೀಲಿಚಿತ್ರಗಳು ಲೈಂಗಿಕ ಅಪರಾಧವನ್ನು ಪ್ರಚೋದಿಸುತ್ತವೆ ಎಂದು ಕೆಲವರು ವಾದಿಸುತ್ತಾರೆ. ಆದರೆ ನೀಲಿಚಿತ್ರಗಳನ್ನು ನೋಡುವವರೆಲ್ಲಾ ಅಪರಾಧ ಎಸಗುತ್ತಾರೆಯೇ ಅಥವಾ ಅಪರಾಧ ಮಾಡುವುವರಿಗೆ ಅದೊಂದೇ ಪ್ರೇರಣೆಯಾಗಿರುತ್ತದೆಯೇ ಎನ್ನುವುದನ್ನು ಯಾವುದೇ ಸಂಶೋಧನೆಯಿಂದ ಸಿದ್ಧಪಡಿಸಲಾಗಿಲ್ಲ.

ನಾನು ನೀಲಿಚಿತ್ರಗಳ ಪ್ರತಿಪಾದಕನಲ್ಲ. ಸರ್ಕಾರ ತನ್ನೆಲ್ಲಾ ಪೋಲೀಸ್ ವ್ಯವಸ್ಥೆಯನ್ನು ಬಳಸಿ ನೀಲಿಚಿತ್ರಗಳ ಜಾಲತಾಣಗಳನ್ನು ಮತ್ತು ನಗರಗಳ ಬೀದಿಬೀದಿಗಳಲ್ಲಿ ದೊರೆಯುತ್ತಿರುವ ಸಿ.ಡಿ.ಗಳನ್ನು ನಿರ್ಬಂಧಿಸುವುದನ್ನು ಬೆಂಬಲಿಸುತ್ತೇನೆ. ಆದರೆ ಇದು ವಾಸ್ತವಿಕವಾದ ಪರಿಹಾರವಲ್ಲ. ಜನರು ತಮ್ಮ ಕುತೂಹಲವನ್ನು ತಣಿಸಿಕೊಳ್ಳಲು ನೀಲಿಚಿತ್ರಗಳಿಗೆ ಎಡತಾಕುವುದನ್ನು ತಪ್ಪಿಸುವುದು ಅಷ್ಟು ಸುಲಭವಲ್ಲ. ಎಲ್ಲರ ಮಲಗುವ ಕೋಣೆಯಲ್ಲಿ ನಡೆಯುವುದನ್ನು ಸರ್ಕಾರ ನಿರ್ಬಂಧಿಸುವುದನ್ನು ಸರ್ವೋಚ್ಚ ನ್ಯಾಯಾಲಯವೂ ಒಪ್ಪುವುದಿಲ್ಲ. ಜೊತೆಗೆ ಜಾಗತೀಕರಣಗೊಂಡ ವ್ಯವಸ್ಥೆಯಲ್ಲಿ ಬೇರೆ ದೇಶಗಳಲ್ಲೆಲ್ಲಾ ಮುಕ್ತವಾಗಿ ದೊರೆಯುತ್ತಿರುವುದನ್ನು ನಮ್ಮ ದೇಶದಲ್ಲಿ ಮಾತ್ರ ನಿಷೇಧಿಸುವುದು ನಿಷ್ಪ್ರಯೋಜಕ ಕೂಡ. ಹಾಗಾಗಿ ಇವುಗಳಿಂದ ಜನರು ಅದರಲ್ಲೂ ಹೆಚ್ಚಾಗಿ ಮಕ್ಕಳು ದಾರಿ ತಪ್ಪದಂತೆ ನಾವು ಎಚ್ಚರವಹಿಸಲೇ ಬೇಕಾಗಿದೆ.

ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ನೀಲಿಚಿತ್ರಗಳನ್ನು ದೂಷಿಸುವುದು ಸಂಪೂರ್ಣ ಚರ್ಚೆಯನ್ನು ದಾರಿ ತಪ್ಪಿಸುತ್ತದೆ. ಲಿಂಗ ಸಮಾನತೆಯ ಬಗೆಗೆ ನಾವೆಲ್ಲ ಸೂಕ್ಷ್ಮ ಸಂವೇದನೆಗಳನ್ನು ಬೆಳೆಸಿಕೊಳ್ಳಬೇಕಾಗಿರುವುದು, ಮಕ್ಕಳಿಗೆ ಇದರ ಶಿಕ್ಷಣ ನೀಡುವ ಅಗತ್ಯ, ಸಮಾಜದಲ್ಲಿ ಮಹಿಳೆಯರಿಗೆ ಒಟ್ಟಾರೆಯಾಗಿ ಸಿಗಬೇಕಾಗಿರುವ ಗೌರವಾದರಗಳು–ಮುಂತಾದ ಎಲ್ಲಾ ವಿಷಯಗಳನ್ನು ಕಡೆಗಣಿಸಿ ಕೇವಲ ನೀಲಿಚಿತ್ರಗಳ ಮೇಲೆ ಗೂಬೆ ಕೂರಿಸುವುದರಿಂದ ಏನನ್ನೂ ಸಾಧಿಸಲಾಗುವುದಿಲ್ಲ.

ಸಮೀಕ್ಷೆಗಳ ಪ್ರಕಾರ ನೀಲಿಚಿತ್ರಗಳು ಎಲ್ಲರೂ ತಿಳಿದಿರುವಷ್ಟು ಅಪಾಯಕಾರಿಯೂ ಅಲ್ಲ. 2000ನೇ ಇಸವಿಯಲ್ಲಿ ಅಮೆರಿಕಾದಲ್ಲಿ ಅಂತರ್ಜಾಲಕ್ಕಾಗಿ ಬ್ರಾಡ್‌ಬ್ಯಾಂಡ್ ಸೇವೆಗಳು ಪ್ರಾರಂಭವಾದ ನಂತರ ನೀಲಿಚಿತ್ರಗಳು ಭಾರೀ ಪ್ರಮಾಣದಲ್ಲಿ ಎಲ್ಲರಿಗೂ ಸುಲಭವಾಗಿ ದೊರೆಯತೊಡಗಿದವು. ಡಾ. ಮಾರ್ಟಿ ಕ್ಲೈನ್ ಎನ್ನುವ ಅಮೆರಿಕಾದ ಸುಪ್ರಸಿದ್ಧ ಲೈಂಗಿಕ ಮತ್ತು ದಾಂಪತ್ಯ ಮನೋಚಿಕಿತ್ಸಕ ಹೇಳುವಂತೆ– ಅಮೆರಿಕಾದ ಗೂಢಚಾರ ಸಂಸ್ಥೆ ಎಫ್‌ಬಿಐನ ಅಂಕಿ ಅಂಶಗಳ ಪ್ರಕಾರ 2000ದಿಂದ 2012ರ ಮಧ್ಯೆ ಲೈಂಗಿಕ ಅಪರಾಧಗಳು, ಮಕ್ಕಳ ಲೈಂಗಿಕ ಶೋಷಣೆ, ವಿಚ್ಛೇದನ ಮತ್ತು ಆತ್ಮಹತ್ಯೆಯ ಪ್ರಕರಣಗಳು ಗಮನಾರ್ಹವಾಗಿ ಕಡಿಮೆಯಾಗಿವೆ. ಯೂರೋಪಿನ ಇತರ ಸಾಕಷ್ಟು ದೇಶಗಳಲ್ಲಿ ಮತ್ತು ಜಪಾನ್, ಕೊರಿಯಾ ಮುಂತಾದ ಏಷ್ಯಾದ ದೇಶಗಳಲ್ಲಿ ನಡೆಸಿದ ಸಮೀಕ್ಷೆಗಳೂ ಕೂಡ ಇದೇ ರೀತಿಯ ಫಲಿತಾಂಶ ನೀಡಿವೆ. ವೈಜ್ಞಾನಿಕವಾದ ಲೈಂಗಿಕ ಶಿಕ್ಷಣ ನೀಡುವುದು ಹದಿವಯಸ್ಸಿನ ಲೈಂಗಿಕ ಸಮಸ್ಯೆಗಳನ್ನು ಕಡಿಮೆ ಮಾಡುತ್ತದೆ ಎನ್ನುವುದೂ ಕೂಡ ಸಾಕಷ್ಟು ದೇಶಗಳಲ್ಲಿ ನಡೆದ ಸಮೀಕ್ಷೆಗಳಿಂದ ತಿಳಿದುಬಂದಿದೆ.

ಹಾಗಾಗಿ ನಮ್ಮ ಸುತ್ತಲೂ ಕಂಡುಬರುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಅಂತರ್ಜಾಲ, ಮುಕ್ತವಾಗಿ ದೊರೆಯುತ್ತಿರುವ ಮಾಹಿತಿಗಳು, ಲೈಂಗಿಕ ಶಿಕ್ಷಣ ಮುಂತಾದವುಗಳು ಕಾರಣ ಎನ್ನುವ ನಮ್ಮ ಆಧಾರರಹಿತ ಅನಿಸಿಕೆಗಳನ್ನು ಬದಲಾಯಿಸಿಕೊಂಡು ಹೊಸ ದಿಕ್ಕಿನಲ್ಲಿ ಯೋಚಿಸಬೇಕಿದೆ. ಎಲ್ಲವನ್ನೂ ಕೇವಲ ಕಾನೂನು ಸಮಸ್ಯೆಯಾಗಿ ನೋಡಿದರೆ ಲೈಂಗಿಕ ಅಪರಾಧಗಳನ್ನು ಮತ್ತು ದೌರ್ಜನ್ಯಗಳನ್ನು ಕಡಿಮೆ ಮಾಡುವುದು ಹಾಗೂ ತಪ್ಪಿಸುವುದು ಸಾಧ್ಯವಿಲ್ಲ.

ಆದರೆ ಇವತ್ತು ಸಿಗುತ್ತಿರುವಷ್ಟು ಮುಕ್ತವಾಗಿ ಮತ್ತು ವೈವಿಧ್ಯಮಯವಾಗಿ ಲೈಂಗಿಕ ವಿಚಾರಗಳ ಮಾಹಿತಿಗಳು ಮತ್ತು ದೃಶ್ಯಾವಳಿಗಳು ಹಿಂದೆಂದೂ ದೊರೆಯುತ್ತಿರಲಿಲ್ಲ ಎನ್ನುವುದೂ ಸತ್ಯ. ಜೊತೆಗೆ 21ನೇ ಶತಮಾನದಲ್ಲಿ ಎಲ್ಲಾ ವಯಸ್ಸು, ವರ್ಗ, ವೃತ್ತಿಯವರಿಗೂ ಎಲ್ಲವೂ ಸಮಾನವಾಗಿ ದೊರೆಯುತ್ತಿದೆ. ಅಂದರೆ ಇಲ್ಲಿ ಮಾತ್ರ ನಾವು ಸಂಪೂರ್ಣ ಸಮಾಜವಾದವನ್ನು ಸ್ಥಾಪಿಸಿದ್ದೇವೆ! ಇಂತಹ ಮಾಹಿತಿಗಳ ಮಹಾಪೂರದಲ್ಲಿ ಉಪಯುಕ್ತವಾಗಿರುವುದೆಷ್ಟು? ದಾರಿ ತಪ್ಪಿಸುವುದೆಷ್ಟು? ವಿಕೃತವಾಗಿ ಮತ್ತು ವೈಭವೀಕರಿಸಿ ತೋರಿಸುತ್ತಿರುವುದೆಷ್ಟು? ಇದನ್ನೆಲ್ಲಾ ಪ್ರೌಢ ವಯಸ್ಸಿನವರಿಗೇ ನಿರ್ಧರಿಸಲು ಸಾಧ್ಯವಿಲ್ಲದಿರುವಾಗ ಮಕ್ಕಳ ಮೇಲೆ ಇವುಗಳ ಪ್ರಭಾವ ಎಂತಹದ್ದಿರಬಹುದು?

ನೀಲಿ ಚಿತ್ರಗಳು ಮತ್ತಿತರ ಲೈಂಗಿಕ ಮಾಹಿತಿ ಇರುವ ಜಾಲತಾಣಗಳು ಮಾಡುತ್ತಿರುವುದು ವ್ಯಾಪಾರ ಆಗಿರುವುದರಿಂದ ಇಲ್ಲಿ ಕೊಳ್ಳುವವರು ಎಚ್ಚರಿಕೆಯಿಂದ ಇರಬೇಕೆಂದು ಕಾನೂನು ಹೇಳುತ್ತದೆ. ಹಾಗಾಗಿ ಇಂತಹ ಜಾಲತಾಣಗಳ ಬಗ್ಗೆ ಗ್ರಾಹಕರಾದ ನಾವೆಲ್ಲಾ ಏನು ಎಚ್ಚರಿಕೆ ವಹಿಸುತ್ತಿದ್ದೇವೆ? ನಮ್ಮ ಮಕ್ಕಳಿಗೆ ಇದರ ಬಗೆಗೆ ಏನು ಶಿಕ್ಷಣ ನೀಡುತ್ತಿದ್ದೇವೆ?

### ಆಧಾರರಹಿತ ಭಯ

ಲೈಂಗಿಕತೆಯ ಬಗೆಗೆ ಮುಕ್ತವಾಗಿ ಚರ್ಚೆ ಮಾಡುತ್ತಾ ಹೋದರೆ ಮತ್ತು ವೈಜ್ಞಾನಿಕ ಮಾಹಿತಿಗಳನ್ನು ಮಕ್ಕಳಾದಿಯಾಗಿ ಎಲ್ಲರಿಗೂ ನೀಡಲು ಪ್ರಾರಂಭಿಸಿದರೆ ಮುಕ್ತ ಲೈಂಗಿಕ ಕ್ರಿಯೆಗೆ ಪ್ರಚೋದನೆ




